ಅಧೀಕ್ಷಕ ಅಭಿಯಂತರರು(ವಿ)
ಕಾ ಮತ್ತು ಪಾ ವೃತ್ತ, ಕೇಶ್ವಾಪೂರ, ಹುಬ್ಬಳ್ಳಿ-23
Tel: 0836-2364144, Fax: 0836-2366184

Superintending Engineer(Ele)
O & M Circle, Keshwapur, Hubballi-23
E-mail ID: seehbl.hescom@gmail.com



Corporate Identity Number (CIN) : U31401KA2002SGC030437


## ಗ್ರಾಹಕರ ಕುಂದುಕೊರತೆಗಳ ನಿವಾರಣೆ ವೇದಿಕೆ

ಕಾರ್ಯ ಮತ್ತು ಪಾಲನೆ ವೃತ್ತ, ಹೆಸ್ಕಾಂ, ಹುಬ್ಬಳ್ಳಿ, ಧಾರವಾಡ ಜಿಲ್ಲೆ

**ಪ್ರಕರಣ ಸಂಖ್ಯೆ:238**

**ವೇದಿಕೆಯ ಸದಸ್ಯರು:**

ಶ್ರೀ **ಎಮ್. ಆರ್. ಶಾನಭಾಗ,** ಅಧೀಕ್ಷಕ ಇಂಜಿನೀಯರ(ವಿ)ಕಾಮತ್ತು ಪಾ ವೃತ್ತ ಹೆಸ್ಕಾಂ ಹುಬ್ಬಳ್ಳಿ ಹಾಗೂ ವೇದಿಕೆಯ ಅಧ್ಯಕ್ಷರು.

ಶ್ರೀ **ರಾಮಪ್ಪ. ಎನ್. ಎನ್,** ಉಪಲೆಕ್ಕ ನಿಯಂತ್ರಣಾಧಿಕಾರಿ ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ವೇದಿಕೆಯ ಸದಸ್ಯರು.

ಶ್ರೀಮತಿ, **ಲೀಲಾ ಆರ್ ಹಿರೇಮಠ,** ವಕೀಲರು, ಆಯೋಗದಿಂದ ನಿಯೋಜಿಸಲಾದ ಸದಸ್ಯರು.

ಶ್ರೀ ಡಾ: ಮಾಧವರಂಗ ಎಂ. ಪಿ,
ಕೆ.ಎಚ್.ಬಿ. ಕಾಲೋನಿ,
ಲಕಮನಹಳ್ಳಿ, ಧಾರವಾಡ. .............**ದೂರುದಾರರು.**

**ವಿರುದ್ಧ,**

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)
ಕಾ ಮತ್ತು ಪಾ ಗ್ರಾಮೀಣ ಉಪ ವಿಭಾಗ,
ಹೆಸ್ಕಾಂ, ಧಾರವಾಡ. .................**ಪ್ರತಿವಾದಿಗಳು.**

**ಪೀಠಿಕೆ:**

1. ಕೆ.ಎಚ್.ಬಿ ಕಾಲೋನಿ ಲಕಮನಹಳ್ಳಿ, ಗಣಪತಿಗುಡಿ ಹತ್ತಿರ ಕೆ.ಎಂ.ಎಫ್ ಎದುರಿಗೆ, ಧಾರವಾಡ ಇವರ ಹೊಲದಲ್ಲಿರುವ ಫಾರ್ಮ ಹೌಸ್ಸಿಗೆ ಕಟ್ಟಡಕ್ಕೆ ದಿನಾಂಕ: 09-04-2018 ರಂದು ರೂ. 25 ನೊಂದಣಿ ಶುಲ್ಕ ಭರಿಸಿ, ಶ್ರೀ ಡಾ: ಮಾಧವರಂಗ ಎಂ. ಪಿ, ಇವರ ಹೆಸರಿನಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ, ಗ್ರಾಮೀಣ ಉಪ ವಿಭಾಗ, ಹೆಸ್ಕಾಂ, ಧಾವಾಡ ಇವರಲ್ಲಿ ಗ್ರಾಹಕರು ಅರ್ಜಿ ಸಲ್ಲಸಿರುತ್ತಾರೆ. ಆದರೆ ವಿದ್ಯುತ್ ಸಂಪರ್ಕಕ್ಕೆ ಸಂಬಂಧಿಸಿದಂತೆ ಉಪ ವಿಭಾಗಾಧಿಕಾರಿಗಳು ಸುಮಾರು ಒಂದುವರೆ ತಿಂಗಳಾದರೂ ಯಾವುದೇ ಪ್ರತಿಕ್ರೀಯೆಯನ್ನು ನೀಡುರುವುದಿಲ್ಲವೆಂದು ಮತ್ತು ಸದರ ವಿಷಯದಲ್ಲಿ ಗ್ರಾಹಕರು ನಿಗಮದ ಮೇಲಾಧಿಕಾರಿಗಳಿಗೂ ಪತ್ರವ್ಯಹಾರಗಳನ್ನು ಮಾಡಿರುತ್ತಾರೂ ವಿದ್ಯುತ್ ಸಂಪರ್ಕವನ್ನು ನೀಡಿರುವುದಿಲ್ಲವೆಂದು KERC ES & D Code ಪಕಾರ ವಿಳಂಬವಾದ ಅವಧಿಗೆ ಸಾತ್ವಾಂನ ಮೊತ್ತವನ್ನು ಪಾವತಿಸಿಕೊಡುವಂತೆ ದಿನಾಂಕ:28-08-2018 ರಂದು ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆಯಲ್ಲಿ ಪ್ರಕರಣ ಧಾಖಲಿಸಿರುತ್ತಾರೆ.
2. ಶ್ರೀ ಡಾ: ಮಾಧವರಂಗ ಎಂ. ಪಿ, ಇವರ ಹೆಸರಿನಲ್ಲಿ, ವಿದ್ಯುತ್ ಸಂಪರ್ಕಕ್ಕಾಗಿ, ಶ್ರೀ ಗೋಪಾಲ ಆರ್ ಬಲ್ಲರವಾಡ ವಿದ್ಯುತ್ ಗುತ್ತಿಗೆದಾರರು ದಿನಾಂಕ:09-04-2018 ರಂದು ಅರ್ಜಿ ಸಲ್ಲಿಸಿದ್ದು, ಅರ್ಜಿದಾರರು ವಿದ್ಯುತ್ ಸಂಪರ್ಕ ಪಡೆಯಲು ಸಮರ್ಪಕವಾದ ದಾಖಲಾತಿ ಮತ್ತು ಮಾಹಿತಿ ನೀಡದೇ ವಿಳಂಬವಾಗಿದೇ ಎಂದು ದೂರಿ, ಸಾಂತ್ವಾನ ಮೊತ್ತವನ್ನು ನೀಡುವಂತೆ ಅರ್ಜಿ ಸಲ್ಲಿಸಿರುವುದನ್ನು ಒಪ್ಪಲಾಗುವುದಿಲ್ಲ. ಗ್ರಾಹಕರು ಸಲ್ಲಿಸಿರುವ ಸಂಪರ್ಕದ ಅರ್ಜಿಯೊಂದಿಗೆ ಖರೀದಿ ಪತ್ರ ಸಲ್ಲಿಸಿದ್ದು, ಇದರೊಂದಿಗೆ ಆರ್.ಟಿ.ಸಿ., ಮತ್ತು ಫಾರ್ಮ ಹೌಸ್ ಕುರಿತು ಗ್ರಾಮ ಲೆಕ್ಕಾಧಿಕಾರಿ ವೆಂಕಟಾಪೂರವರಿಂದ ಪಡೆದ ಪ್ರಮಾಣ ಪತ್ರಗಳನ್ನು ಸಲ್ಲಿಸದೇ ಇರುವುದರಿಂದ ವಿದ್ಯುತ್ ಸಂಪರ್ಕ ವಿಳಂಬವಾಗಿದೆಯೇ ವಿನಃ ಇದರಲ್ಲಿ

.....2

ನಿಗಮದಿಂದ ಯಾವುದೇ ವಿಳಂಬವಾಗಿರುವುದಿಲ್ಲವೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಗ್ರಾಮೀಣ ಉಪ ವಿಭಾಗ, ಹೆಸ್ಕಾಂ, ಧಾರವಾಡರವರು ವೇದಿಕಗೆ ವಿನಂತಿಸಿಕೊಂಡಿರುತ್ತಾರೆ.

8. ಸದರ ಪ್ರಕರಣವನ್ನು ದಿನಾಂಕ: 29-09-2018 ರಂದು ವಿಚಾರಣೆಯನ್ನು ನಡೆಸಲಾಯಿತು. ನಿಗಮದ ಪರವಾಗಿ ಶ್ರೀ ಮಂಜುನಾಥ ಬಿ ಟೆಂಗರಿಕರ್. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಗ್ರಾಮೀಣ ಉಪ ವಿಭಾಗ, ಹೆಸ್ಕಾಂ, ಧಾರವಾಡ ಹಾಗೂ ಶ್ರೀ ಗೋಪಾಲ ಆರ್ ಬಲ್ಲರವಾಡ, ಗ್ರಾಹಕರ ಪರವಾಗಿ ಹಾಜರಿದ್ದರು.

## ಗ್ರಾಹಕರ ಪರವಾಗಿ, ಶ್ರೀ ಗೋಪಾಲ ಆರ್ ಬಲ್ಲರವಾಡ ಇವರು (ಎ) ಫಾರ್ಮನೋದಿಗೆ ಸಲ್ಲಿಸಿದ ಲಿಖಿತ ಹೇಳಿಕೆ

1) ದಿನಾಂಕ: 09-04-2018 ರಂದು ಶ್ರೀ ಡಾ: ಮಾಧವರಂಗ ಎಂ. ಫ, ಕೆ.ಎಚ್.ಬಿ ಕಾಲೋನಿ ಲಕಮನಹಳ್ಳಿ, ಗಣಪತಿಗುಡಿ ಹತ್ತಿರ ಕೆ.ಎಂ.ಎಫ್ ಎದುರಿಗೆ, ಧಾರವಾಡ ಇವರು ಹೊಲದಲ್ಲಿರುವ ಫಾರ್ಮ ಹೌಸ್ಸಿಗೆ ಕಟ್ಟಡಕ್ಕೆ ವಿದ್ಯುತ್ ಸಂಪರ್ಕಕ್ಕಾಗಿ ರೂ. 25 ನೊಂದಣಿ ಶುಲ್ಕ ಭರಿಸಿ, ಗ್ರಾಮೀಣ ಉಪ ವಿಭಾಗ, ಹೆಸ್ಕಾಂ, ಧಾವಾಡದಲ್ಲಿ ಅರ್ಜಿ ಸಲ್ಲಸಲಾಯಿತು.
2) ಆದರೆ ಸುಮಾರು ಒಂದುವರೆ ತಿಂಗಳಾದರೂ ಉಪ ವಿಭಾಗದಿಂದ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ.
3) ದಿನಾಂಕ:22-05-2018 ರಂದು ಹೆಸ್ಕಾಂ, ಉಪ ವಿಭಾಗಾಧಿಕಾರಿಯವರಿಗೆ ಈ ಕುರಿತು ನೆನೆಪೋಲೆ ಪತ್ರ ನೀಡಿರುತ್ತೇನೆ. ತದನಂತರ ಈ ಕುರಿತು ಉಪ ವಿಭಾಗ ಧಾರವಾಡರವರಿಂದ ಯಾವುದೇ ಮಾಹಿತಿ ಬರದೇ ಇದ್ದ ಪ್ರಯುಕ್ತ ಈ ವಿಷಯವಾಗಿ ದಿನಾಂಕ:05-07-2018 ರಂದು ತಾಂತ್ರಿಕ ನಿರ್ದೇಶಕರಿಗೆ ಹೆಸ್ಕಾಂ, ನಿಗಮ ಕಛೇರಿರವರಿಗೆ ಪತ್ರವನ್ನು ಬರೆದು ಅದರ ಪ್ರತಿಯನ್ನು ಗ್ರಾಮೀಣ ವಿಭಾಗ ಧಾರವಾಡರವರಿಗೆ ಸಲ್ಲಿಸಿರುತ್ತಾರೆ.
4) ಈ ಕುರಿತು ದಿನಾಂಕ:13-07-2018 ರಂದು ಕಾರ್ಯರ್ಯನಿರ್ವಾಹಕ ಇಂಜಿನೀಯರ(ವಿ) ಗ್ರಾಮೀಣ ವಿಭಾಗ, ಹೆಸ್ಕಾಂ, ಧಾರವಾಡದಿಂದ ಸ.ಕಾ.ನಿ.ಇಂ(ವಿ) ಗ್ರಾಮೀಣ ಉಪ ವಿಭಾಗ ಧಾರವಾಡ ಇವರಿಗೆ ಸ್ಥಳ ಪರೀಶೀಲನೆ ವರದಿ ಸಲ್ಲಿಸುವಂತೆ ಬರೆದ ಪತ್ರದ ನಮಗೆ ಬಂದಿರುತ್ತದೆ. ನಂತರ ದಿನಾಂಕ:18-07-2018 ರಂದು ಗ್ರಾಹಕರಿಗೆ ಲಿಖಿತವಾಗಿ ಸ.ಕಾ.ನಿ.ಇಂ(ವಿ) ಗ್ರಾಮೀಣ ಉಪ ವಿಭಾಗ ಧಾರವಾಡ ಇವರು ಈ ಅರ್ಜಿಯು ವಸತಿ ಬಡಾವಣೆಗೆ ಸಂಬಂಧಿಸಿದ್ದೆಂದು ನಿಯಮಾನುಸಾರ ಮೂಲಬೂತ ಸೌಕರ್ಯಗಳನ್ನು ಬಡಾವಣೆ ಅಭಿವೃದ್ಧಿದಾರರಿಂದ ಕೈಗೊಳ್ಳುವಂತೆ ಸೂಚಿಸಿ, ನಮಗೆ ಪತ್ರ ಬರೆದಿರುತ್ತಾರೆ.
5) ದಿನಾಂಕ:23-07-2018 ರಂದು ವಿದ್ಯುತ್ ಸಂಪರ್ಕ ನೀಡಲು ವಿಳಂಬಾಗಿದ್ದಕ್ಕೆ ಎಸ್.ಓ.ಪಿ ಪ್ರಕಾರ ರೂ.15,000/- ವಿಳಂಬ ಪರಿಹಾರ ನೀಡುವಂತೆ ಎ ಫಾರ್ಮನೊಂದಿಗೆ ಸ.ಕಾ.ನಿ.ಇಂ(ವಿ) ಗ್ರಾಮೀಣ ಉಪ ವಿಭಾಗ ಧಾರವಾಡ ಇವರಿಗೆ ಅರ್ಜಿ ಸಲ್ಲಿಸಿರುತ್ತೇನೆ. ಈ ಕುರಿತು ಯಾವುದೇ ಮಾಹಿತಿ/ ಪರಿಹಾರ, ಉಪ ವಿಭಾಗಾಧಿಕಾರಿಗಳಿಂದ ಬಾರದೇ ಇದ್ದುದರಿಂದ ದಿನಾಂಕ:28-08-2018 ರಂದು ಗ್ರಾಹಕರ ಕುಂದುಕೊರತೆ ನಿವಾರಣೆ ವೇದಿಕೆ ಧಾರವಾಡ ಜಿಲ್ಲೆ ಹುಬ್ಬಳ್ಳಿರವರಲ್ಲಿ ಎ ನಮೂನೆಯೊಂದಿಗೆ ಅರ್ಜಿ ಸಲ್ಲಿಸಿರುತ್ತೇನೆ.
6) ನಂತರ ದಿನಾಂಕ:24-09-2018 ರಂದು ಸ.ಕಾ.ನಿ.ಇಂ(ವಿ) ಗ್ರಾಮೀಣ ಉಪ ವಿಭಾಗ ಧಾರವಾಡರವರು ತಮ್ಮ ಪತ್ರದ ಮೂಲಕ ಸುಸಜ್ಜಿತ ವಸತಿ ಬಡಾವಣೆಯಾಗಿದ್ದು, ಇದಕ್ಕೆ ಈ ಬಡಾವಣೆಗೆ ವಿದ್ಯುತ್ತಿನ ಮೂಲಬೂತ ಸೌಕರ್ಯಗಳನ್ನು ಅಭಿವೃದ್ದಿದಾರರಿಂದ ಪಡೆದು ತದನಂತರ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸುವಂತೆ ತಿಳಿಸಿರುತ್ತಾರೆ.
7) ಆರ್.ಟಿ.ಸಿ. ಖರೀದಿ ಪತ್ರ, ಮತ್ತು ಫಾರ್ಮ ಹೌಸ್ ಕುರಿತು ಗ್ರಾಮ ಲೆಕ್ಕಾಧಿಕಾರಿ ವೆಂಕಟಾಪೂರವರಿಂದ ಪ್ರಮಾಣ ಪತ್ರಗಳನ್ನು ವಿದ್ಯುತ್ ಕೋರಿಕೆಯ ಅರ್ಜಿಯ ಜೊತೆಗೆ ಸ.ಕಾ.ನಿ.ಇಂ(ವಿ) ಗ್ರಾಮೀಣ ಉಪ ವಿಭಾಗ ಧಾರವಾಡರವರಿಗೆ ಸಲ್ಲಿಸಿರುತ್ತೇನೆ.

.....3

**ಶ್ರೀ ಮಂಜುನಾಥ ಬಿ ಟಿಂಗರಿಕರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಕಾ ಮತ್ತು ಪಾ ಗ್ರಾಮೀಣ ಉಪವಿಭಾಗ, ಹೆಸ್ಕಾಂ, ಧಾರವಾಡ ಇವರ ಲಿಖಿತ ಹೇಳಿಕೆ.**

1) ಸುಮಾರು ಒಂದುವರೆ ತಿಂಗಳು ವಿಳಂವಾಗಿದೇ ಎಂದು ಗ್ರಾಹಕರು ಹೇಳಿರುವುದನ್ನು ಒಪ್ಪುತ್ತಿಲ್ಲ. ಕೆ.ಇ.ಆರ್.ಸಿ ನಿಯಮಾನುಸಾರ ಪ್ರಸ್ತುತ ಇರುವ ರೂಢೀಯಂತೆ ಮನಿಕಂಟ ಎಲೆಕ್ಟ್ರಿಕಲ್ಸರವರು, ಉಳ್ಳಾಗಡ್ಡಿ ಓಣಿ ಧಾರವಾಡರವರು ವಿದ್ಯುತ್ ಸಂಪರ್ಕಕ್ಕಾಗಿ ಗ್ರಾಹಕರ ಪರವಾಗಿ ಅರ್ಜಿ ಸಲ್ಲಿಸಿರುತ್ತಾರೆ.
2) .ಈ ವಿಷಯದ ಕುರಿತು ಮೇಲಾಧಿಕಾರಿಗಳಿಗೆ ಸ್ಪಷೀಕರಣ ಕುರಿತು ಪತ್ರ ಬರೆದಿದ್ದಿರುತ್ತದೆ ಆದರೆ ಸಧ್ಯ ಯಾವುದೇ ದಾಖಲಾತಿಗಳು ಇರುವುದಿಲ್ಲ ಸದರ ದಾಖಲೆಗಳನ್ನು ಮುಂದಿನ ವಿಚಾರಣೆ ದಿನಾಂಕದಂದು ಹಾಜರುಪಡಿಸಲು ಕಾಲವಕಾಶಕ್ಕೆ ವಿನಂತಿಸಿಕೊಳ್ಳುತ್ತೇನೆ. ಈ ಕುರಿತು ಗುತ್ತಿಗೆದಾರರಿಗೆ ಮೌಖಿಕವಾಗಿ ಮಾಹಿತಿ ನೀಡಿರುತ್ತೇನೆ.
3) ದಿನಾಂಕ:22-05-2018 ರಂದು ಗ್ರಾಹಕರು ವಿದ್ಯುತ್ ಸಂಪರ್ಕಗಾಗಿ ಸಲ್ಲಿಸಿರುವ ನೆನಪೋಲೆ ಪತ್ರಕ್ಕೆ ಸಂಬಂಧಿಸಿದಂತೆ ವಿದ್ಯುತ್ ಗುತ್ತಿಗೆದಾರರಿಗೆ ಈಗಾಗಲೇ ಈ ಕುರಿತು ಮೇಲಾಧಿಕಾರಿಗಳಿಗೆ ಸ್ಪಷ್ಟೀಕರಣ ಕೇಳಿದ ವಿಷಯವನ್ನು ಗ್ರಾಹಕರಿಗೆ ತಿಳಿಸಿದ್ದರೂ ಇಲ್ಲವೂ ಎಂದು ಕೇಳಲಾಗಿ ಗುತ್ತಿಗೆದಾರರು ಈ ವಿಷಯವನ್ನು ಗ್ರಾಹಕರ ಗಮನಕ್ಕೆ ತರುವುದಾಗಿ ತಿಳಿಸಿರುತ್ತಾರೆ.
4) ಗ್ರಾಹಕರು ಸ್ಥಾವರಕ್ಕೆ ಸಂಪರ್ಕ ನೀಡಲು ವಿಳಂಭವಾಗಿದ್ದಕ್ಕೆ ಸಾಂತ್ವಾನ ಮೊತ್ತ ರೂ. 15,000/- ಗಳನ್ನು ನೀಡುವಂತೆ ನಮ್ಮ ಕಛೇರಿಗೆ ಅರ್ಜಿ ಸಲ್ಲಿಸಿರುತ್ತೇನೆಂದು ತಿಳಿಸಿದ್ದು, ಇದ್ದು ವೇದಿಕೆಯಿಂದ ಈಗ ಪಡೆದಿದ್ದು, ಈ ಪತ್ರ ನಮ್ಮ ಉಪ ವಿಭಾಗದಲ್ಲಿ ಸ್ವೀಕೃತವಾಗಿರುವ ಬಗ್ಗೆ ಪರಿಶೀಲಿಸಿ ಮುಂದಿನ ವಿಚಾರಣೆ ದಿನಾಂಕದಂದು ಮಾಹಿತಿ ನೀಡುತ್ತೇನೆ. ಮುಂದುವರೆದು ಈ ಅರ್ಜಿಯನ್ನು ಅರ್ಜಿದಾರರು ವಿದ್ಯುತ್ ಸಂಪರ್ಕ ಪಡೆಯಲು ಸಮಪರ್ಕವಾದ ದಾಖಲಾತಿ ಮತ್ತು ಮಾಹಿತಿ ನೀಡದೇ ವಿಳಂಬವಾಗಿದೇ ಎಂದು ದೂರಿ ಸಾಂತ್ವಾನ ಮೊತ್ತವನ್ನು ನೀಡುವಂತೆ ಅರ್ಜಿ ಸಲ್ಲಿಸಿರುವುದನ್ನು ಒಪ್ಪಲಾಗುವುದಿಲ್ಲ.
5) ಗ್ರಾಹಕರು ಸಲ್ಲಿಸಿರುವ ಸಂಪರ್ಕದ ಅರ್ಜಿಯೊಂದಿಗೆ ಖರೀದಿ ಪತ್ರ ಸಲ್ಲಿಸಿದ್ದು, ಇದರೊಂದಿಗೆ ಆರ್.ಟಿ.ಸಿ., ಮತ್ತು ಫಾರ್ಮ ಹೌಸ್ ಕುರಿತು ಗ್ರಾಮ ಲೆಕ್ಕಾಧಿಕಾರಿ ವೆಂಕಟಾಪೂರವರಿಂದ ಪಡೆದ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದಿಲ್ಲ.

**ಪ್ರಕರಣದ ಸಾರಾಂಶದ ಮೇಲೆ ವೇದಿಕೆಯ ಅಭಿಪ್ರಾಯ:**

ಸದರ ಪ್ರಕರಣದಲ್ಲಿ ಗ್ರಾಹಕರ ಹೇಳಿಕೆ ಹಾಗೂ ನಿಗಮದ ಅಧಿಕಾರಿಗಳ ಹೇಳಿಕೆ ಮತ್ತು ಕಡತದಲ್ಲಿಯ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಮಾಹಿತಿ ಕಂಡು ಬರುತ್ತದೆ.

1. ಶ್ರೀ ಡಾ: ಮಾಧವರಂಗ. ಎಂ. ಪಿ, ರವರು ಸರ್ವೆ ನಂ:28 ವೆಂಕಟಾಪೂರ ಗ್ರಾಮದಲ್ಲಿ ಫಾರ್ಮ ಹೌಸ್‌ಗೆ, ವಿದ್ಯುತ್ ಸಂಪರ್ಕ ಪಡೆಯಲು ಅರ್ಜಿಸಲ್ಲಿಸಿರುತ್ತಾರೆ.
2. ಸದರಿಯವರು ವಿದ್ಯುತ್ ಕೋರಿಕೆಯ ಅರ್ಜಿಯ ಜೊತೆಗೆ ಸಂಬಂಧಪಟ್ಟ ಅವಶ್ಯವಿರುವ ಎಲ್ಲಾ ದಾಖಲೆಗಳನ್ನು ನೀಡಿರುವ ಬಗ್ಗೆ ವೇದಿಕೆಗೆ ಧಾಖಲೆ ಸಹಿತ ಮಾಹಿತಿ ನೀಡಿರುವುದಿಲ್ಲ.
3. ಲೈಸನ್ಸುದಾರ ಸ್ಥಳ ಪರಿಶೀಲನೆ ಮಾಡಿದಾಗ ಸದರಿ ಸರ್ವೆ ನಂಬರ್ 28/1 ರಲ್ಲಿ ಫಾರ್ಮ ಹೌಸ್ ಇಲ್ಲದಿದ್ದು, ಅಭಿವೃದ್ಧಿಹೊಂದಿರುವ ಬಡಾವಣೆಯಲ್ಲಿ ಕಟ್ಟಡ ಕಟ್ಟಿದ್ದು, ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಅರ್ಜಿದಾರರು KERC, COS ನ Regulation 10 ರಲ್ಲಿ ಅರ್ಜಿ ನೊಂದಾಯಿಸಬೇಕಾಗಿರುತ್ತದೆ. ಆದ್ದರಿಂದ ಅರ್ಜಿದಾರರು ಅರ್ಜಿಯನ್ನು ಇತ್ಯರ್ಥಗೊಳಿಸಲು ವಿಳಂಬವಾಗಿದೆ ಮತ್ತು ಪರಿಹಾರ ನೀಡಬೇಕೆಂದು ವೇದಿಕೆಗೆ ವಿನಂತಿಸಿಕೊಂಡಿರುವುದನ್ನು ದಾಖಲೆಸಹಿತ ರುಜುವಾತುಪಡಿಸಲು ಅರ್ಜಿದಾರರು ವಿಫಲರಾಗಿರುತ್ತಾರೆ.
4. ಅರ್ಜಿದಾರರು ಲೈಸನ್ಸುದಾರರಿಗೆ ಪಾರ್ಮ ಹೌಸ್‌ಗೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡಬೇಕೆಂದು ಸರಿಯಾದ ದಾಖಲಾತಿ ಇಲ್ಲದೇ ತಪ್ಪಾಗಿ ಅರ್ಜಿ ಸಲ್ಲಿಸಿರುವುದು ಕಂಡುಬರುವುದರಿಂದ ಅರ್ಜಿದಾರರು ಕೋರಿರುವ ಪರಿಹಾರ ಮೊತ್ತವನ್ನು ಕೊಡಲು ಬರುವುದಿಲ್ಲ.

....4

**ಆದೇಶ ಸಂಖ್ಯೆ:ಅಇಂ(ವಿ)/ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-238/** Cys-1103 **ದಿನಾಂಕ:** 24 NOV 2018

ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಆದೇಶ ಸಂಖ್ಯೆ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/13-14/ಸಿವೈಎಸ್-769 ದಿ.16.07.2013 ರನ್ವಯ ಹಾಗೂ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/16-17/ಸಿವೈಎಸ್-3851 ದಿ.28.01.2017 ಮತ್ತು ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/15-16/ಸಿವೈಎಸ್-916 ದಿ.13.06.2018 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

1. ಗ್ರಾಹಕರ ಮನವಿಯನ್ನು ಪುರಸ್ಕರಿಸಲಾಗಿಲ್ಲ.

| | | |
|---|---|---|
| (ರಾಮಪ್ಪ ಎನ್ ಎನ್) | (ಲೀಲಾ ಆರ್ ಹಿರೇಮಠ) | (ಎಮ್. ಆರ್. ಶಾನಭಾಗ) |
| ಉಪಲೆಕ್ಕ ನಿಯಂತ್ರಣಾಧಿಕಾರಿ ಹಾಗೂ ಗ್ರಾಕುಂಕೊನಿವೇ ಸದಸ್ಯರು ಕಾ ಮತ್ತು ಪಾ ವೃತ್ತ, ಹುಬ್ಬಳ್ಳಿ | ಆಯೋಗದಿಂದ ನಿಯೋಜಿಸಲಾದ ಸದಸ್ಯರು. | ಅಧೀಕ್ಷಕ ಇಂಜಿನೀಯರ(ವಿ) ಕಾ & ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ಅಧ್ಯಕ್ಷರು, ಧಾರವಾಡ ಜಿಲ್ಲೆ ಗ್ರಾ.ಕುಂ.ಕೊ.ನಿ.ವೇದಿಕೆ. |

ಗೆ,

ಶ್ರೀ ಡಾ: ಮಾಧವರಂಗ ಎಂ. ಪಿ,
ಕೆ.ಎಚ್.ಬಿ. ಕಾಲೋನಿ,
ಗಣಪತಿ ದೇವಾಸ್ಥನದ ಹತ್ತಿರ,
ಕೆ.ಎಮ್.ಎಫ್ ಎದುರಿಗೆ,
ಪಿ. ಬಿ. ರೋಡ. ಧಾರವಾಡ.

**"ನೊಂದಣಿ ಅಂಚೆ ಮೂಲಕ"**

**ಪ್ರತಿ:**

1. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ, ಹುವಿಸಕಂನಿ., ಕೇಶ್ವಾಪುರ, ಹುಬ್ಬಳ್ಳಿ-23 ಇವರ ದಯಾಪರ ಮಾಹಿತಿಗಾಗಿ.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕಂಪನಿ ಕಛೇರಿ, ಹುವಿಸಕಂನಿ, ಹುಬ್ಬಳ್ಳಿರವರ ಆದರ ಪೂರ್ವಕ ಮಾಹಿತಿಗಾಗಿ
3. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಗ್ರಾಮೀಣ ವಿಭಾಗ, ಹುವಿಸಕಂನಿ., ಧಾರವಾಡ ಇವರಿಗೆ ಮಾಹಿತಿಗಾಗಿ. ಸೂಕ್ತ ಕ್ರಮಕ್ಕಾಗಿ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಗ್ರಾಮೀಣ ಉಪ ವಿಭಾಗ, ಹುವಿಸಕಂನಿ., ಧಾರವಾಡ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಮಹಾ ಕಡತ